**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**

# ಗೋಬರ್ ಧನ್

## ಯೋಜನೆಯ ಅನುಷ್ಠಾನದಿಂದ **250**ಕ್ಕೂ ಹೆಚ್ಚು ಭಕ್ತಾಧಿಗಳಿಗೆ ಶ್ರೀ ಮಠದಿಂದ **ಅನ್ನದಾಸೋಹ**



ಗ್ರಾಮೀಣ ಭಾಗದ ಸ್ವಚ್ಛತೆ ಹಾಗೂ ನೈರ್ಮಲ್ಯತೆಯನ್ನು ಕಾಪಾಡಲು, ತ್ಯಾಜ್ಯವನ್ನು ಸಂಪನ್ಮೂಲವನ್ನಾಗಿಸುವ ಉದ್ದೇಶದಿಂದ ಆರಂಭಗೊಂಡ ಯೋಜನೆಯೇ ಗೋಬರ್ ಧನ್. ರಾಜ್ಯದ ವಿವಿಧ ಭಾಗಗಳಲ್ಲಿ ಗೋಬರ್ ಧನ್ ಯೋಜನೆ ಅನುಷ್ಠಾನ ಕಾರ್ಯ ಯಶಸ್ವಿಯಾಗಿದೆ. ಅದರಲ್ಲಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಆಚಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇರುವ ಶ್ರೀ ಮುರುಘಾ ರಾಜೇಂದ್ರ ಸಂಸ್ಥಾನ ಮಠವೂ ಒಂದು.

ಶಿವಮೊಗ್ಗ ಜಿಲ್ಲೆಯಲ್ಲಿ ನಿರ್ಮಾಣಗೊಂಡಿರುವ ಮೊದಲ ಗೋಬರ್ ಧನ್ ಘಟಕ ಇದಾಗಿದ್ದು ಆಗಸ್ಟ್ ತಿಂಗಳಲ್ಲಿ ಕಾಮಗಾರಿ ಪ್ರಾರಂಭಗೊಂಡು ಪ್ರಸ್ತುತ ಒಂದು ತಿಂಗಳಿನಿಂದ ಬಳಕೆಯಲ್ಲಿದೆ.

### ಗೋಬರ್ ಧನ್ ಯೋಜನೆಯ ಬಳಕೆಯಿಂದ ನಿತ್ಯ 250ಕ್ಕೂ ಹೆಚ್ಚಿನ ಭಕ್ತರಿಗೆ ಅನ್ನದಾಸೋಹ:

ಶ್ರೀ ಮುರುಘಾ ರಾಜೇಂದ್ರ ಸಂಸ್ಥಾನ ಮಠವು ಜಿಲ್ಲೆಯ ಪ್ರಮುಖ ಮಠಗಳಲ್ಲಿ ಒಂದಾಗಿದ್ದು, ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದೆ. ರಾಜ್ಯದ ವಿವಿಧ ಮೂಲಗಳಿಂದ ಇಲ್ಲಿಗೆ ಭಕ್ತರು ಭೇಟಿ ನೀಡುತ್ತಾರೆ. ಮಠಕ್ಕೆ ಆಗಮಿಸುವ ಭಕ್ತರಿಗೆ ಅನ್ನದಾಸೋಹ ವ್ಯವಸ್ಥೆ ಇದ್ದು ಈ ಮೊದಲು ತಿಂಗಳಿಗೆ 7 ರಿಂದ 8 ಸಿಲಿಂಡರ್ ಬಳಕೆಯಾಗುತ್ತಿತ್ತು. ಇದರ ಪರ್ಯಾಯವಾಗಿ ಈಗ ಗೋಬರ್ ಧನ್ ಯೋಜನೆ ಅನುಷ್ಠಾನಗೊಂಡಿದ್ದು ಈಗ 1 ರಿಂದ 2 ಸಿಲಿಂಡರ್ ಬಳಕೆಯಾಗುತ್ತಿದ್ದು ದಾಸೋಹಕ್ಕೆ ಮಾಡಲಾಗುತ್ತಿದ್ದ ಖರ್ಚು ಕಡಿಮೆಯಾಗಿದೆ. ಇನ್ನು ಪ್ರತಿನಿತ್ಯ 250 ಕ್ಕೂ ಹೆಚ್ಚಿನ ಭಕ್ತಾದಿಗಳು ಅನ್ನ ದಾಸೋಹದಲ್ಲಿ ಪ್ರಸಾದ ಸ್ವೀಕರಿಸುತ್ತಿದ್ದಾರೆ.

### ಗೋಬರ್ ಧನ್ ಯೋಜನೆ ಆರಂಭಗೊಂಡಿದ್ದು ಹೇಗೆ?

ಶ್ರೀ ಮಠದಲ್ಲಿ ನೂರಾರು ವರ್ಷಗಳಿಂದ ಗೋಶಾಲೆಯಿದ್ದು ಒಟ್ಟು 125 ಕ್ಕೂ ಹೆಚ್ಚಿನ ಜಾನುವಾರುಗಳು ಇಲ್ಲಿವೆ. ಗೋಶಾಲೆಯಿಂದ ಉತ್ಪತ್ತಿಯಾಗುವ ಸಗಣಿ ಮೊದಲು ತೋಟದ ಗೊಬ್ಬರವಾಗಿ ಬಳಕೆಯಾಗುತ್ತಿತ್ತು. ಆದರೆ ಯೋಜನೆಯ ಮೂಲಕ ಘಟಕ ಅನುಷ್ಠಾನಗೊಂಡ ನಂತರ ಸಂಗ್ರಹಗೊಂಡ ಸಂಪೂರ್ಣ ಸಗಣಿಯನ್ನು ಗೋಬರ್ ಧನ್ ಘಟಕಕ್ಕೆ ಬಳಸಿ ಅನಿಲ ಉತ್ಪಾದನೆ ಮಾಡಲಾಗುತ್ತಿದೆ.

ಗೋಬರ್ ಧನ್ ಘಟಕದಿಂದ ಉತ್ಪತ್ತಿಯಾಗುವ ಸ್ಲರಿ ಅಂಶವು ಮಠವು ಹೊಂದಿರುವ  ಅಡಿಕೆ ತೋಟಕ್ಕೆ ಬಳಸಲಾಗುತ್ತಿದೆ. ಗೋಬರ್ ಧನ್ ಕಾಮಗಾರಿ ಪೂರ್ಣಗೊಂಡು ಶ್ರೀ ಮಠಕ್ಕೆ ಹಸ್ತಾಂತರಗೊಂಡ ನಂತರ ಇದರ ಸಂಪೂರ್ಣ ನಿರ್ವಹಣೆ ಮಠದ್ದಾಗಿರುತ್ತದೆ.

ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಯೋಜನೆಯ ಘಟಕಾಂಶಗಳಲ್ಲಿ ಗೋಬರ್ ಧನ್ ಯೋಜನೆ ಒಂದಾಗಿದ್ದು ಸಮುದಾಯ ಹಾಗೂ ಸಾಂಸ್ಥಿಕ ಬಳಕೆಗೆ ಅನುಕೂಲಕರವಾಗಿದೆ. ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಮುಂದುವರಿದ ಹಂತದಲ್ಲಿ ವೈಯುಕ್ತಿಕ ಶೌಚಾಲಯ ಒಳಗೊಂಡಂತೆ ಘನತ್ಯಾಜ್ಯ, ಮಲ ತ್ಯಾಜ್ಯ ನಿರ್ವಹಣೆ, ಬೂದು ನೀರು ನಿರ್ವಹಣೆ, ಸಮುದಾಯ ಶೌಚಾಲಯ ಹಾಗೂ ಗೋಬರ್ ಧನ್ ಘಟಕಗಳು ಯಶಸ್ವಿಯಾಗಿ ಅನುಷ್ಠಾನಗೊಳ್ಳುತ್ತಿದೆ

